


# ವಿವಿಧ ಕೇಂದ್ರಗಳಲ್ಲಿ ಸ್ವಾಮಿ ಅಭೇದಾನಂದರ ಹಾಗೂ ಸೋದರಿ ನಿವೇದಿತಾಳ ೧೫೦ನೇ ಜನ್ಮ ಶತಮಾನೋತ್ಸವ

ಕಳೆದ ಕೆಲವು ತಿಂಗಳುಗಳಲ್ಲಿ ರಾಮಕೃಷ್ಣ ಮಠ ಮತ್ತು ಮಿಷನ್ನಿನ ವಿವಿಧ ಶಾಖಾಕೇಂದ್ರಗಳಲ್ಲಿ ಸ್ವಾಮಿ ಅಭೇದಾನಂದರ ಹಾಗೂ ಸೋದರಿ ನಿವೇದಿತಾಳ ೧೫೦ನೇ ಜನ್ಮ ಶತಮಾನೋತ್ಸವವನ್ನು ವಿವಿಧ ಕಾರ್ಯಕ್ರಮಗಳೊಂದಿಗೆ ಆಚರಿಲಾಯಿತು. ಅವುಗಳ ಒಂದು ಸಂಕ್ಷಿಪ್ತ ನೋಟ ಇಲ್ಲಿದೆ:

**ಸ್ವಾಮಿ ಅಭೇದಾನಂದರ ೧೫೦ನೇ ಜನ್ಮ ಶತಮಾನೋತ್ಸವ:** **ಬಾರಾನಗರ ಮಠ**ವು ಏಪ್ರಿಲ್ ೨೩ರಂದು ಸಾರ್ವಜನಿಕ ಸಭೆಯೊಂದನ್ನು ಏರ್ಪಡಿಸಿತು. ಇದರಲ್ಲಿ ಸುಮಾರು ೧೦೦ ಮಂದಿ ಪಾಲ್ಗೊಂಡಿದ್ದರು. **ಲಕ್ನೋ ಆಶ್ರಮ**ವು ಏಪ್ರಿಲ್ ೨೩ರಂದು ಆಧ್ಯಾತ್ಮಿಕ ಶಿಬಿರವೊಂದನ್ನು ಏರ್ಪಡಿಸಿದ್ದು, ಇದರಲ್ಲಿ ಸುಮಾರು ೩೦೦ ಮಂದಿ ಭಕ್ತರು ಭಾಗಹಿಸಿದರು. ಈ ಕೇಂದ್ರವು ಯುವಕರಿಗಾಗಿ ನಡೆಸಿದ ವಿಶೇಷ ಕಾರ್ಯಕ್ರಮದಲ್ಲಿ ೧೨೦ ಮಂದಿ ಯುವಕರು ಭಾಗವಹಿಸಿದರು. **ವಡೋದರಾ** ಕೇಂದ್ರವು ಏಪ್ರಿಲ್ ೧೬ರಂದು ಆಧ್ಯಾತ್ಮಿಕ ಶಿಬಿರವೊಂದನ್ನು ನಡೆಸಿತು. ಇದರಲ್ಲಿ ಸುಮಾರು ೧೧೦ ಮಂದಿ ಭಾಗವಹಿಸಿದ್ದರು.

**ಸೋದರಿ ನಿವೇದಿತಾ ಅವರ ೧೫೦ ನೇ ಜನ್ಮ ಶತಮಾನೋತ್ಸವ :** **ಬಾರಾನಗರ ಮಠ**ವು ಜನವರಿ ೨೩ರಂದು ವಿದ್ಯಾರ್ಥಿಗಳಿಗಾಗಿ ಏಕಾಗ್ರತಾ ಶಿಬಿರವನ್ನು ಏರ್ಪಡಿಸಿತು. ಇದರಲ್ಲಿ ೧೦೦ ಮಂದಿ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. **ಕೊಯಮತ್ತೂರು ಮಠ**ವು ಮಾರ್ಚ್ ೪ ರಂದು ಸೋದರಿ ನಿವೇದಿತಾ ಕುರಿತಂತೆ ಭಾಷಣ, ನಾಟಕಗಳನ್ನೊಳಗೊಂಡ ವಿಶೇಷ ಕಾರ್ಯಕ್ರಮವನ್ನು ಏರ್ಪಡಿಸಿತ್ತು . ಇದರಲ್ಲಿ ಸುಮಾರು ೪೦೦ ಮಂದಿ ಭಾಗವಹಿಸಿದ್ದರು. **ಕೊಂಟ್ಯಾ ಆಶ್ರಮ**ವು (ಪ.ಬಂಗಾಳ) ಏಪ್ರಿಲ್ ೮ರಂದು ನಡೆಸಿದ ಭಕ್ತ ಸಮಾವೇಶದಲ್ಲಿ ಸುಮಾರು ೧೬೦ ಮಂದಿ ಭಾಗವಹಿಸಿದರು. **ದಾರ್ಜಿಲಿಂಗ್** ಹಾಗೂ **ಜಲಪ್ಯಾಗುಡಿ ಆಶ್ರಮ**ಗಳು ಮಾರ್ಚ್ ೩೧ರಂದು **ಸಿಲಿಗುರಿ**ಯಲ್ಲಿ ಒಟ್ಟಾಗಿ ಏರ್ಪಡಿಸಿದ ವಿಶೇಷ ಕಾರ್ಯಕ್ರಮದಲ್ಲಿ ವರ್ಣರಂಜಿತ ಮೆರವಣಿಗೆ ಹಾಗೂ ಎರಡು ಸಾರ್ವಜನಿಕ ಸಭೆಗಳು ನಡೆದವು. ಸುಮಾರು ೨೧೦೦ ಮಂದಿ ಇದರಲ್ಲಿ ಭಾಗವಹಿಸಿದ್ದರು. **ಜಲಪ್ಯಾಗುಡಿ ಆಶ್ರಮ**ವು ಏಪ್ರಿಲ್ ೧ರಂದು ನಡೆಸಿದ ಇಡೀ ದಿನದ ಕಾರ್ಯಕ್ರಮದಲ್ಲಿ ಮೆರವಣಿಗೆ, ಯುವಸಮ್ಮೇಳನ, ಸಾರ್ವಜನಿಕ ಸಭೆಗಳು ನಡೆದವು. ಒಟ್ಟು ೩೬೦೦ ಮಂದಿ ಇದರಲ್ಲಿ ಭಾಗವಹಿಸಿದ್ದರು.

**ಲಿಂಬ್ಡಿ ಆಶ್ರಮ**ದಲ್ಲಿ ಏಪ್ರಿಲ್ ೧೮ರಂದು ಸಂಗೀತ ಕಾರ್ಯಕ್ರಮವೊಂದು ಜರುಗಿದ್ದು, ಇದರಲ್ಲಿ ೨೦೦ ಮಂದಿ ಭಾಗವಹಿಸಿದ್ದರು. **ಮೇಖಲಿಗಂಜ್ ಆಶ್ರಮ** ಕೂಡ ಮಾರ್ಚ್ ೩೧ ರಂದು ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಿತು.

**ಪುರಿ ಮಿಷನ್** ಆಶ್ರಮವು ಎರಡು ಕೇಂದ್ರಗಳಲ್ಲಿ ಮಾರ್ಚ್ ೨೨ ಹಾಗೂ ೨೩ರಂದು ಸೋದರಿ ನಿವೇದಿತಾ ಬಗ್ಗೆ ರಸಪ್ರಶ್ನೆ ಸ್ಪರ್ಧಾ ಕಾರ್ಯಕ್ರಮಗಳನ್ನು ಏರ್ಪಡಿಸಿತ್ತು . ಇವುಗಳಲ್ಲಿ ಒಟ್ಟು ೬೧೫ ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. **ರಾಜಾರ್‌ಹಾಟ್ ವಿಷ್ಣುಪುರ್** ಆಶ್ರಮವು ಮಾರ್ಚ್ ೨೪ರಂದು ಸಾಂಸ್ಕೃತಿಕ ಸ್ಪರ್ಧೆಗಳು ಹಾಗೂ ಯುವ ಸಮ್ಮೇಳನ ಕಾರ್ಯಕ್ರಮಗಳನ್ನು ನಡೆಸಿದ್ದು, ಇದರಲ್ಲಿ ಸುಮಾರು ೪೫೦ ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ಸ್ವಾಮಿ ವಿವೇಕಾನಂದರ ನಿವಾಸ** ದಲ್ಲಿ ಮಾರ್ಚ್ ೨೬ ರಂದು ಪ್ರವಚನ, ಮಾರ್ಚ್ ೨೯ ಹಾಗೂ ೩೧ರಂದು ಸಂಗೀತ ಕಾರ್ಯಕ್ರಮಗಳು, ಏಪ್ರಿಲ್ ೧೮ರಂದು ವಿದ್ಯಾರ್ಥಿಗಳಿಗಾಗಿ ವಿಚಾರ ಸಂಕಿರಣ ನಡೆಯಿತು. ಈ ಕಾರ್ಯಕ್ರಮಗಳಲ್ಲಿ ಸುಮಾರು ೧೩೫೦ ಮಂದಿ ಭಾಗವಹಿಸಿದ್ದರು. **ತಿರುಪತಿ ಆಶ್ರಮ**ವು ನಡೆಸಿದ ಪ್ರಬಂಧ ಸ್ಪರ್ಧೆಯಲ್ಲಿ ಸುಮಾರು ೫೦೦ ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. **ವಡೋದರಾ ಆಶ್ರಮ**ವು ಏಪ್ರಿಲ್ ೧೮ರಂದು ನಿವೇದಿತಾ ಜೀವನ ಕುರಿತ ನಾಟಕ ಹಾಗೂ ಚಲನಚಿತ್ರವೊಂದನ್ನು ಪ್ರದರ್ಶಿಸಿತು. ಸುಮಾರು ೩೦೦ ಮಂದಿ ಪ್ರೇಕ್ಷಕರು ಇವನ್ನು ವೀಕ್ಷಿಸಿದರು. **ವಾರಾಣಸಿ ಅದ್ವೈತ ಆಶ್ರಮ**ವು ಏಪ್ರಿಲ್ ೨೩ರಂದು ಆಧ್ಯಾತ್ಮಿಕ ಶಿಬಿರವೊಂದನ್ನು ಏರ್ಪಡಿಸಿತ್ತು. ಇದರಲ್ಲಿ ಸುಮಾರು ೯೦ ಮಂದಿ ಭಕ್ತರು ಭಾಗವಹಿಸಿದ್ದರು.

Managing Editor : Swami Atmajnananda Editor : Swami Jnanayogananda
Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020